**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 16 ಫ್ರಾ.ಸಾ. : 14**

ಸಾಕ್ಷಿಯ ಹೆಸರು : ಮಂಜುನಾಥ
ತಂದೆಯ ಹೆಸರು : ವಿಷ್ಣು ಹೆಗಡೆ
ವಯಸ್ಸು : 65 ವರ್ಷ
ಉದ್ಯೋಗ : ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ವಾಸ : ಗುಣವಂತೆ , ಹೊನ್ನಾವರ

**ದಿನಾಂಕಃ 04-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು ದಿನಾಂಕ 01.09.2005 ರಿಂದ 19.05.2014 ರವರೆಗೆ ಕುಮಟಾದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 28.10.2013 ರಂದು ಕಾರವಾರ ಲೋಕಾಯುಕ್ತ ಪೊಲೀಸ್ ನವರಿಂದ ಈ ಪ್ರಕರಣದಲ್ಲಿ ಗುನ್ನಾ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಪತ್ರ ಬಂದಿತ್ತು. ಆಗ ನಾನು ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಪತ್ರ ನನ್ನ ಮೇಲಾಧಿಕಾರಿಗೆ ಬಂದಿತ್ತು. ಆ ಪತ್ರವನ್ನು ಈಗ ನೋಡಿರುತ್ತೇನೆ. ಆ ಪತ್ರವನ್ನು ನಿ.ಪಿ. 47 ಎಂದು ಗುರುತಿಸಲಾಯಿತು. ನನಗೆ ಸದರಿ ನಕ್ಷೆಯನ್ನು ತಯಾರಿಸಿಕೊಡುವಂತೆ ಸ್ಥಳ ಪರಿಶೀಲನೆ ಮಾಡುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚಿಸಿದರು. ದಿನಾಂಕ 04.12.2013 ರಂದು ನಾನು ಗುನ್ನಾ ಸ್ಥಳಕ್ಕೆ ಹೋದೆ . ದರ್ಶನ ಶಾಂತಾರಾಮ ನಾಯ್ಕ ಎನ್ನುವವರು ನನಗೆ ಗುನ್ನಾ ಸ್ಥಳವನ್ನು ತೋರಿಸಿದರು. ನಾನು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿದೆ. ಈಗ ನಾನು ತಯಾರಿಸಿದ ನಕ್ಷೆ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ನಕ್ಷೆಯನ್ನು ನಿ.ಪಿ. 48 ಎಂದು ಗುರುತಿಸಲಾಯಿತು. ಆ ನಕ್ಷೆಯನ್ನು ನನ್ನ ಮೇಲಾಧಿಕಾರಿಯವರ ಮೂಲಕ ಲೋಕಾಯುಕ್ತ ಪೊಲೀಸ್ ನವರಿಗೆ ಕವಚ ಪತ್ರ ಬರೆದು ಕಳುಹಿಸಲಾಗಿರುತ್ತದೆ. ಈಗ ಆ ಕವಚ ಪತ್ರವನ್ನು

ನೋಡಿರುತ್ತೇನೆ. ಆ ಕವಚ ಪತ್ರವನ್ನು ನಿ.ಪಿ. 48/1 ಎಂದು ಗುರುತಿಸಲಾಯಿತು. ನಕ್ಷೆಯಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 48(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ಗುನ್ಹಾ ಸ್ಥಳ ತೋರಿಸಿದ ವ್ಯಕ್ತಿಯ ಸಹಿಯನ್ನು ನಾನು ನಕ್ಷೆಯಲ್ಲಿ ಪಡೆದಿಲ್ಲ. ಅವರ ಸಹಿಯನ್ನು ಪಡೆಯಲು ತೊಂದರೆ ಇರಲಿಲ್ಲ. ನಿ.ಪಿ. 48 ನಕ್ಷೆಯನ್ನು ನಾನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸ್ಥಳದಲ್ಲಿ ಟಿಪ್ಪಣಿ ಮಾಡಿಕೊಂಡು ಕಚೇರಿಗೆ ಹೋಗಿ ಗಣಕಯಂತ್ರದಲ್ಲಿ ಆ ನಕ್ಷೆ ತಯಾರಿಸಿದ್ದೇನೆ. ಸ್ಥಳದಲ್ಲಿ ತಯಾರಿಸಿಕೊಂಡ ಟಿಪ್ಪಣಿಯನ್ನು ಅದಕ್ಕೆ ನಾನು ಲಗತ್ತಿಸಿಲ್ಲ. ಸ್ಥಳದಲ್ಲಿ ನಾನು ಟಿಪ್ಪಣಿ ಮಾಡಿಕೊಂಡ ಬಗ್ಗೆ ನನ್ನ ಬಾಯಿ ಮಾತಿನ ಹೇಳಿಕೆ ಬಿಟ್ಟರೆ ಬೇರೆ ದಾಖಲಾತಿ ಇರುವುದಿಲ್ಲ. ನಿ.ಪಿ. 48 ರಲ್ಲಿ ಕ್ರಮ ಸಂ. 1 ರ ಬಳಿ ನಿಂತಿರುವ ವ್ಯಕ್ತಿಗೆ ಕ್ರಮ ಸಂ. 3 ರ ಬಳಿ ನಿಂತಿರುವ ವ್ಯಕ್ತಿ ಕಾಣುತ್ತದೆ ಎನ್ನುವ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಹೌದು . ಗುನ್ಹಾ ಸ್ಥಳಕ್ಕೆ ನಾನು ಭೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತ ಠಾಣೆಯಲ್ಲಿ ಕುಳಿತು ಅವರಿಗೆ ಹೇಗೆ ಬೇಕೋ ಹಾಗೆ ಆ ನಕ್ಷೆಯನ್ನು ತಯಾರಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಕ್ಷೆ ತಯಾರಿಸಿಕೊಡಬೇಕು ಎಂದು ಲೋಕಾಯುಕ್ತ ಪೊಲೀಸ್ ನವರು ನನಗೆ ನೇರವಾಗಿ ಹೇಳಿಲ್ಲ ನನ್ನ ಮೇಲಾಧಿಕಾರಿಯಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಹೇಳಿದ್ದರು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸ್ಥಳಕ್ಕೆ ಬಂದಿರಲಿಲ್ಲ. ನಾನು ಸ್ಥಳದಲ್ಲಿ ತಯಾರಿಸಿಕೊಂಡ ಟಿಪ್ಪಣಿಯನ್ನು ನಿ.ಪಿ. 48 ಕ್ಕೆ ಅಳವಡಿಸದ ಹೊರತು ಆ ಟಿಪ್ಪಣಿ ಪ್ರಕಾರ ನಿ.ಪಿ. 48 ಇದೆ ಎಂದು ಹೇಳಲು ಆಗುವುದಿಲ್ಲ ಎಂದರೆ ನಾನು ಅದೇ ಪ್ರಕಾರ ನಕ್ಷೆ ತಯಾರಿಸಿದ್ದೇನೆ. ನಾನು ಪ್ರಶ್ನೆಗೆ ಸಮಂಜಸ ಉತ್ತರ ಕೊಡದೇ ಅಸಮಂಜಸ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ಹಾ ಸ್ಥಳಕ್ಕೆ ನಾನು ಹೋಗದೇ ಇರುವುದರಿಂದ ಅಸಮಂಜಸ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುನ್ಹಾ ಸ್ಥಳದಲ್ಲಿ ಯಾವುದೇ ಟಿಪ್ಪಣಿ ಬರೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿ.ಪಿ. 48 ರಲ್ಲಿ ಕ್ರಮ ಸಂ. 1 ಎಂದು ಬರೆದ ಜಾಗದಿಂದ ತಾಲೂಕು ಪಂಚಾಯತಿ ಸೈಕಲ್ / ಮೋಟಾರ್ ಸೈಕಲ್ ಸ್ಟ್ಯಾಂಡ್ ವರೆಗೆ ಇರುವ ಅಂತರ ಹೇಳಲು ಆಗುವುದಿಲ್ಲ. ಅದೇ ರೀತಿ ಕ್ರಮ ಸಂ. 3 ಮತ್ತು 1 ರ ನಡುವೆ ಅಂತರ ನನಗೆ

ಹೇಳಲು ಆಗುವುದಿಲ್ಲ. ಅಂದಾಜಿನ ಮೇಲೆ ನಾನು ನಕ್ಷೆ ತಯಾರಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದರ್ಶನ ನನಗೆ ಗುನ್ನಾ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ